**ಓ ಎಸ್ ನಂ. 76/2018**
**ಪಿ ಡಬ್ಲ್ಯೂ: 1**

**ದಿಃ 18.10.2022 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಹೆಚ್.ಎಲ್.ಎನ್ ವಕೀಲರಿಂದಃ**

ನನಗೆ ಪ್ರತಿವಾದಿಗಳು ಗೊತ್ತು. 1 ನೇ ಪ್ರತಿವಾದಿಯರ ತಾಯಿ ವಾಸಮ್ಮ ಕೋಂ ನರಸಿಂಹಶೆಟ್ಟಿ ನನಗೆ ಗೊತ್ತು.ವಾಸಮ್ಮರವರನ್ನು ಆಲಂಪಲ್ಲಿ ಕುಟುಂಬದವರು ಎಂದು ಕರೆಯುತ್ತಾರೆ ಎಂದರೆ ಸರಿ. ವಾಸಮ್ಮರವರಿಗೆ 5 ಜನ ಮಕ್ಕಳಿದ್ದು, ಸುರೇಶ ಬಾಬು, ನಾಗರಾಜ ಶೆಟ್ಟಿ, ನಿರ್ಮಲ ಹಾಗೂ ಮತ್ತಿಬ್ಬರ ಹೆಸರನ್ನು ಸಧ್ಯ ಹೇಳಲು ಬರುವುದಿಲ್ಲ. ವಾಸಮ್ಮನವರ ಮತ್ತಿಬ್ಬರು ಮಕ್ಕಳ ಹೆಸರು ನಾಗವೇಣಿ ಮತ್ತು ಸೀತಾಲಕ್ಷ್ಮೀ ಎಂದರೆ ಸರಿ. ನಾಗವೇಣಿ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಮೃತ ನಾಗವೇಣಿರವರಿಗೆ ಗಂಡ ಮತ್ತು ಮಕ್ಕಳು ಇರುತ್ತಾರೆ ಎಂದರೆ ಸರಿ. 1 ನೇ ದಾವಾ ಸ್ವತ್ತನ್ನು ನನ್ನ ಅಜ್ಜಿ ವಾಸಮ್ಮನವರಿಗೆ ಅವರ ತಂದೆಯವರು ದಾನದ ಮುಖಾಂತರ ನೀಡಿದ ಸ್ವತ್ತಾಗಿರುತ್ತದೆ ಎಂದರೆ ಸರಿ. 2 ನೇ ದಾವಾ ಸ್ವತ್ತನ್ನು ನನ್ನ ಅಜ್ಜಿ ವಾಸಮ್ಮನವರಿಗೆ ಅವರ ತಂದೆಯವರು ದಾನದ ಮುಖಾಂತರ ನೀಡಿದ ಸ್ವತ್ತಾಗಿರುತ್ತದೆ ಎಂದರೆ ಸರಿ. 1 ನೇ ದಾವಾ ಸ್ವತ್ತಿನ ಅಸೆಸ್ಮೆಂಟ್ ಸಂಖ್ಯೆಯಾಗಲೀ, ವಿಸ್ತೀರ್ಣವಾಗಲೀ ಮತ್ತು ಚಕ್ಕುಬಂದಿಯಾಗಲೀ ನನಗೆ ಗೊತ್ತಿಲ್ಲ. 2 ನೇ ದಾವಾ ಸ್ವತ್ತಿನ ಅಸೆಸ್ಮೆಂಟ್ ಸಂಖ್ಯೆಯಾಗಲೀ, ವಿಸ್ತೀರ್ಣವಾಗಲೀ ಮತ್ತು ಚಕ್ಕುಬಂದಿಯಾಗಲೀ ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ದಾವಾ ಸ್ವತ್ತಿನ ವಿಚಾರಗಳು ನನ್ನ ತಾಯಿಯವರಿಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. 1 ನೇ ದಾವಾ ಆಸ್ತಿಗೆ ವಾಸಮ್ಮ ಹಾಗೂ ಅವರ ಮಕ್ಕಳು ಹಕ್ಕುದಾರರು ಎಂದರೆ ಸರಿ. ವಾಸಮ್ಮನವರ ಎಲ್ಲಾ ಮಕ್ಕಳನ್ನು ಸದರಿ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ನಾಗವೇಣಿರವರ ಗಂಡ ಮತ್ತು ಮಕ್ಕಳನ್ನು ಸದರಿ ದಾವೆಯಲ್ಲಿ ಪಕ್ಷಕಾರರನ್ನಾಗಿ ಸೇರ್ಪಡೆ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಸೀತಾಲಕ್ಷ್ಮೀ, ನಿರ್ಮಲ ಮತ್ತು ಪುಷ್ಪವಲ್ಲಿ ರವರನ್ನು ಪಕ್ಷಕಾರರನ್ನಾಗಿ ಸೇರ್ಪಡೆ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ವಾಸಮ್ಮನವರ ಮಗ ನಾಗರಾಜಶೆಟ್ಟಿರವರು ಮದುವೆ ಇಲ್ಲದೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಾಗರಾಜಶೆಟ್ಟಿರವರು ಮದುವೆಯಾಗಿ 5 ಜನ ಮಕ್ಕಳಾದ ಬಳಿಕ ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನಾಗರಾಜಶೆಟ್ಟಿರವರು ಮದುವೆಯಾಗಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿಯಾದ ನನ್ನ ತಾಯಿ ನಾಗರತ್ನಮ್ಮ ರವರ ತಂದೆ ಕಾಡಪ್ಪ ಹಾಗೂ ತಾಯಿ ಕರಿಯಮ್ಮ ಎಂದರೆ ಸರಿ. ಅವರು ನಾಯಕ ಜನಾಂಗದವರು ಎಂದರೆ ಸರಿ. ಅವರನ್ನು ಮಾರನಾಯಕನ ವಂಶಸ್ಥರು ಎಂದು ಕರೆಯುತ್ತಾರೆ ಎಂದರೆ ಸರಿ. ಅವರ ಮೂಲ ಊರು ಚಿನ್ನಕಟ್ಟೆ ಗ್ರಾಮ, ಮಾಡದಕೆರೆ

ಹೋಬಳಿ, ಹೊಸದುರ್ಗ ತಾಲ್ಲೂಕು ಎಂದರೆ ಸರಿ. ನನ್ನ ತಾಯಿ 1 ನೇ ವಾದಿಯಾದ ನಾಗರತ್ನಮ್ಮರವರನ್ನು ಕ್ಯಾಲಿಗೆರೆ ಗ್ರಾಮದ ಮಾರಪ್ಪ ನವರ ಮಗ ತಿಮ್ಮಪ್ಪ ಎಂಬುವರಿಗೆ ಕೊಟ್ಟು ಮದುವೆ ಮಾಡಿದ್ದರು ಎಂದರೆ ಸರಿಯಲ್ಲ. 1 ನೇ ವಾದಿಯಾದ ನಾಗರತ್ನಮ್ಮ ರವರು ನಾಗರಾಜಶೆಟ್ಟಿರವರನ್ನು ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ವಾದಿಗಳಾದ ನಾವು ನಾಗರಾಜಶೆಟ್ಟಿರವರ ವಂಶಸ್ಥರಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಹೂಡುವ ಉದ್ದೇಶದಿಂದ ಸುಳ್ಳು ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. 2 ನೇ ದಾವಾ ಆಸ್ತಿಯನ್ನು ದಿಃ08.12.1952 ರಂದು ಆಲಂಪಲ್ಲಿ ವಿರೂಪಾಕ್ಷಪ್ಪರವರ ಮಕ್ಕಳಾದ ಚನ್ನಪ್ಪಶೆಟ್ಟಿ, ಸಿದ್ದಪ್ಪಶೆಟ್ಟಿ ಮತ್ತು ಆಲಂಪಲ್ಲಿ ಸುಬ್ಬಣ್ಣನವರ ದತ್ತು ಮಗನಾದ ನಂಜುಂಡಶೆಟ್ಟಿ ಎಲ್ಲರೂ ಸೇರಿಕೊಂಡು ಚನ್ನಪ್ಪಶೆಟ್ಟಿರವರ ಷಷ್ಠಿಪೂರ್ತಿ ಕಾರ್ಯಕ್ರಮದ ಸಂದರ್ಭದಲ್ಲಿ ನೊಂದಾಯಿತ ದಾನ ಪತ್ರದ ಮೂಲಕ ವಾಸಮ್ಮನವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಈ ಮೂಲಕ ವಾಸಮ್ಮನವರ ಹೆಸರಿಗೆ 2 ನೇ ದಾವಾ ಸ್ವತ್ತಿನ ಖಾತೆ ಆಗಿರುತ್ತದೆ ಎಂದರೆ ಸರಿ. ವಾಸಮ್ಮನವರಿಗೆ ದಾನದ ಮೂಲಕ ಬಂದಿರುವ ಸ್ವತ್ತು ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ವಾಸಮ್ಮನವರಿಗೆ ವಯಸ್ಸಾದ ಕಾಲದಲ್ಲಿ 1 ನೇ ಪ್ರತಿವಾದಿಯಾದ ಸುರೇಶಬಾಬು ತನ್ನ ತಾಯಿಯಾದ ಯೋಗಕ್ಷೇಮವನ್ನು ನೋಡಿಕೊಂಡ ಕಾರಣ ವಾಸಮ್ಮನವರು ದಿಃ31.08.2009 ರಂದು 2 ನೇ ದಾವಾ ಸ್ವತ್ತನ್ನು ನೊಂದಾಯಿತ ದಾನ ಪತ್ರದ ಮೂಲಕ 1 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ವಾಸಮ್ಮನವರು ಯಾರಿಗೂ ಹೇಳದೆ ದಾನ ಬರೆದುಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ವಾಸಮ್ಮನವರು ದಾನ ಪತ್ರದ ಮೂಲಕ 2 ನೇ ದಾವಾ ಸ್ವತ್ತನ್ನು 1 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಕಾರಣ ನಮಗೆ ದಾವಾ ಸ್ವತ್ತಿನಲ್ಲಿ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 6 ರವರ ಮಾತನ್ನು ಕೇಳಿಕೊಂಡು ಸುಳ್ಳು ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಹಾಗೂ ಅಧಿಕಾರ ಇಲ್ಲದಿದ್ದರೂ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 2 ರಿಂದ 5 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹೊಸದುರ್ಗ.